# ಪರಿಸರ ಪ್ರಜ್ಞೆ

● ಡಾ. ಎಚ್. ರಾಮಚಂದ್ರಸ್ವಾಮಿ

ವೇದಗಳಲ್ಲಿ ನಿರೂಪಿತವಾಗಿರುವ ದೈವಪ್ರಜ್ಞೆಯ ಬಗ್ಗೆ, ಪರತತ್ತ್ವ ಮೀಮಾಂಸೆಯ ಬಗ್ಗೆ ಪಂಡಿತರಲ್ಲಿ ಅಭಿಪ್ರಾಯಭೇದ ಇರಬಹುದು. ಆದರೆ ಋಗ್ವೇದದ ಋಷಿಗಳ ಪರಿಸರ ಪ್ರಜ್ಞೆಯ ಬಗ್ಗೆ ಎರಡನೆಯ ಮಾತೇ ಇಲ್ಲ. ಪರಿಸರವನ್ನು ಕಂಡು ಅದರ ಹಾಗೆ ಆಸ್ವಾದಿಸುವ, ಆನಂದಪಡುವ ಯೋಗ್ಯತೆ ಪರಿಸರ ಸಂರಕ್ಷಣೆ ಯೆಂದು ಬೊಬ್ಬಿರಿಯುವ ನಮಗಂತೂ ಇಲ್ಲ. ದೈವಿಕತೆ ಎನ್ನುವುದು ಪಾಶವೀಯತೆಯನ್ನು ಬಿಟ್ಟು ಸುಸಂಸ್ಕೃತನಾಗಿ ಮಾನವೀಯತೆಯ ಹುತ್ತಕ್ಕೇರಿದ ಮಾನವನ ಇನ್ನೂ ಮುಂದುವರೆದ ಉತ್ಕೃಷ್ಟ ಭಾವನೆ; ಬದುಕಿನ ಬಗೆಗಿನ ಅನನ್ಯವಾದ ಪ್ರೀತಿ ಹಾಗೂ ಶ್ರದ್ಧೆಗಳು ದೈವಿಕತೆಯ ದ್ಯೋತಕವಾಗಿವೆ. ಭೀತಿರಹಿತ ಆನಂದವು ಅದರ ಇನ್ನೊಂದು ಲಕ್ಷಣ. ಋಗ್ವೇದವು ಈ ಆರೋಹಣವನ್ನು ಸ್ಪಷ್ಟವಾಗಿ ಚಿತ್ರಿಸುತ್ತದೆ: ದೈವಿಕತೆಯ ಸಂಪ್ರಾಪ್ತಿಯ ಸ್ವರ್ಗೀಯ ಸನ್ನಿವೇಶವನ್ನು ಉಚ್ಚ ಕಂಠದಿಂದ ಹಾಡಿ ದಾಖಲಿಸುತ್ತದೆ.

ಮನುಷ್ಯನ ಭಾವವಿಕಾಸಕ್ಕೂ ಪ್ರಕೃತಿಗೂ ಅವಿನಾಸಂಬಂಧ ಇದೆ. ಪ್ರಕೃತಿಯನ್ನು ವರ್ಣಿಸದ ಕವಿ ಯಾರಿದ್ದಾರೆ? ಲೋಕದಲ್ಲಿ ಬದುಕು ನಿರಾಶಾದಯಕ, ಅರ್ಥರಹಿತ, ಅಸಂಗತ ಎಂದು ಪ್ರತಿಪಾದಿಸುವ ತತ್ತ್ವದರ್ಶನಗಳೂ ಇಲ್ಲದಿಲ್ಲ. ಆದರೆ ಮನುಷ್ಯನ ಅಂತಸ್ಸತ್ತ್ವ ವಿಕಾಸಗೊಂಡು ಹೊರಬರಬೇಕಾದರೆ ಆಶಾವಾದದ ಮೂಲಕವೇ ಹೊರತು ನಿರಾಶಾವಾದದ ಮೂಲಕ ಅಲ್ಲ. ಇಂತಹ ಆಶಾವಾದ ಋಗ್ವೇದದಲ್ಲಿ ಧಾರಾಳವಾಗಿದೆ. ಮಾನವನ ಬದುಕಿನ ಸಂತೋಷವು ಪ್ರಕೃತಿಮಾತೆಯ ಪಾದಗಳನ್ನೇ ಆಶ್ರಯಿಸಿಕೊಂಡಿದೆ ಎಂಬುದನ್ನು ಋಗ್ವೇದದ ಋಷಿಗಳು ಅರ್ಥಮಾಡಿಕೊಂಡಿದ್ದರು. ಆಶಾವಾದದ ಮೂಲಭೂತ ಸೆಲೆಯೇ ಪ್ರಕೃತಿಯನ್ನು ಕೆಡಿಸುವುದಕ್ಕೆ ಹೋಗದೆ, ಅದರ ಒಂದು ಭಾಗವಾಗಿ ಬದುಕುವುದರಲ್ಲಿದೆ ಎಂಬುದು ಅವರಿಗೆ ತಿಳಿದಿತ್ತು. ಈ ಸತ್ಯವನ್ನು ಅಷ್ಟು ಹಿಂದೆಯೇ ಅರಿತುಕೊಂಡಿದ್ದ ಬೇರಾವ ಸಂಸ್ಕೃತಿಯೂ ಜಗತ್ತಿನ ಇತಿಹಾಸದಲ್ಲಿ ಕಾಣಸಿಗದು.

ಪ್ರಪಂಚದ ಸಂಸ್ಕೃತಿ-ನಾಗರಿಕತೆಗಳು ರೂಪುತಾಳಿದ್ದು ಮಹಾನದಿಗಳ ಬಯಲುಗಳಲ್ಲಿ ಎಂಬುದು ನಮಗೆ ತಿಳಿದೇ ಇದೆ. ಸ್ವಾಭಾವಿಕವಾಗಿ ನಾವು ಹಂಬಲಿಸುವ ಮನಶ್ಶಾಂತಿ ನಮಗೆ ಸಿಕ್ಕಬೇಕಾದರೆ ಪ್ರಕೃತಿಯ ಸನ್ನಿಧಿಯಲ್ಲೇ ಹೊರತು ಕಾಂಕ್ರೀಟ್ ಕಾಡುಗಳಲ್ಲಿ ಅಲ್ಲ. ಋಗ್ವೇದದಲ್ಲಿನ ಒಂದೊಂದು ಪ್ರಕೃತಿ ವರ್ಣನೆಯನ್ನು ಓದಿ ಅರ್ಥಮಾಡಿಕೊಂಡರೂ ನಮ್ಮ ಮನಸ್ಸು ಸಂತೋಷದಿಂದ, ಶಾಂತಿಯಿಂದ ತುಂಬಿ ತುಳುಕುತ್ತದೆ:



ಸೂರ್ಯಕಿರಣವು ಹಾದಿ ತೋರಿದ ಹಾಗೆ ಹರಿಯುವ ನದಿಗಳೇ
ಇಂದ್ರವಜ್ರವು ಸೀಳಿ ಸುರಿಸಿದ ನೀರು ತುಂಬಿದ ನದಿಗಳೇ
ಅನವರತ ನಮಗೊಳಿತು ಮಾಡಿರಿ, ನಮ್ಮ ಬದುಕನು ತುಂಬಿರಿ.

(ಋಗ್ವೇದ ಮಂಡಲ ೭, ಸೂಕ್ತ ೪೭, ಶ್ಲೋಕ ೪)

ಅವತರಿಸಿ ಆಕಾಶದಿಂ ಸುರಿದು ಹರಿಯುವ ಜಲಗಳೇ
ನದಿಗಳಿಂದುಕ್ಕುಕ್ಕಿ ಸಾಗರ ಸೇರಲಿರುವಾ ಜಲಗಳೇ
ಸ್ವಯಮುದ್ಭವಿಸಿ ಉಕ್ಕುವ ಊಟೆಯೇ, ಕಾಲುವೆಯ ಜಲಗಳೇ
ನಿರ್ಮಲ ಅಪೋದೇವಿಯರು ನೀವೆಮ್ಮ ಹರಸಿರಿ, ಕಾಪಿಡಿ.

(ಋ.೭.೪೯,೨)

ತಗ್ಗಿನೆಡೆ ಧಾವಿಸುವ ನದಿಗಳು, ಎತ್ತರದಿ ಹರಿವ ನದಿಗಳು
ಉದಕದಿಂ ತುಂಬಿರುವ ನದಿಗಳು,
ರೋಗ, ಹಿಂಸೆಗಳಂ ನೀಡದೆ
ಜಲಸಮೃದ್ಧಿಯಿಂ ಕಲ್ಯಾಣಮಂ ನಿರ್ಮಲತೆಯಿಂ ತಾವು ನೀಡಿ.

(ಋ.೭.೫೦.೪)

ಸ್ವರ್ಗಕಾಂತಿಯ ಪರ್ಜನ್ಯದೇವಗೆ ಹೇಳುವೆವು ಈ ಮಾತನು
ನಮ್ಮ ಈ ಸ್ತುತಿ ಅವನ ಹೃದಯವ ತಟ್ಟಿ ಉಕ್ಕಲಿ, ಕರುಣೆಯು
ಕಾಲಕಾಲಕೆ ವೃಷ್ಟಿಯಾಗಲಿ, ಸುಫಲವೃಕ್ಷಗಳೆಲ್ಲೆಡೆ ಹಚ್ಚಹಸಿರಿಂ
ನಲಿಯಲಿ. (ಋ.೭.೧೦೧.೫)

ಡಾ. ಎಚ್. ರಾಮಚಂದ್ರಸ್ವಾಮಿ ಅವರು ಶೃಂಗೇರಿಯ ಕಾಲೇಜಿನ ನಿವೃತ್ತ ಪ್ರಾಂಶುಪಾಲರು, ವಿಶಾಲವಾದ ಪಾಂಡಿತ್ಯವನ್ನು ಪಡೆದಿರುವ ಸಹೃದಯರು. 'ವಿವೇಕಪ್ರಭ'ದ ಓದುಗರಿಗೆ ಈಗಾಗಲೇ ಅನೇಕ ವಿಚಾರಗಳನ್ನು ತಿಳಿಸಿಕೊಟ್ಟಿರುವ ಲೇಖಕರು. ಇವರ ಹಲವಾರು ಗ್ರಂಥಗಳು ಮೈಸೂರಿನ ಶ್ರೀರಾಮಕೃಷ್ಣ ಆಶ್ರಮದಿಂದ ಪ್ರಕಟಿತವಾಗಿವೆ.

ರಾಜಿಸುವ ಪೃಥಿವಿಯೆ, ಗುಣಶಾಲಿ ಸಲಹುವ ತಾಯಿಯೆ,
ಧರಿಸಿರುವೆ ಬೆಟ್ಟಗಳನು ನೀ ಜೀವಿಗಳು ಬದುಕಲೆಂದು.
(ಋ.೫.೮೫.೧)

ಬೆಳಗುತಿಹ ಹೇ ಸೂರ್ಯಜ್ಯೋತಿಯೆ
ನಿನ್ನ ನೋಡುತ ಬಾಳ್ವೆವು
ದೀರ್ಘದರುಶನ ಅನವರತ ಕರುಣಿಸು ಅನುದಿನವು
ಮೂಡುವ ಮಿತ್ರನೇ
ಪ್ರೇಮಮಯರೂ, ನಿಷ್ಕಳಂಕರು ರೋಗರಹಿತರು ಪ್ರಜಾವಂತರು
ಆಗಿ ಬಾಳುವಂತೆಮಗೆ ದೀರ್ಘಾಯುವನು
ನೀಡು ಹೇ ಸೂರ್ಯದೇವ (ಋ.೧೦.೩೩.೭)

ಸರಸತಿಯು ಜಲಧಾರೆ ಶುಭ್ರವು
ಇಕ್ಕಲದಿ ವಾಸಿಸುವ ಜನರಿಗೆ
ಅನ್ನದಾಯಿನಿ ರಕ್ಷಕಿಯೆ ನೀ
ಮಹಿಮಾನ್ವಿತೆ ನದಿಯೆ ಕಾಪಿಡು ಎಮ್ಮನೂ
ಅಮಿತ ಧನಸಮೃದ್ಧಿಯಿತ್ತು ರಕ್ಷಿಸು
ಮರುತ್ತುಗಳ ಒಡನಾಡಿಯೆ (ಋ.೩.೯೬.೨)

ಕುಡಿಸಿರೆಮಗೆ ನೀವ್ ಮಧುರಜೀವನರಸವ ದ್ಯಾವಾ ಪೃಥಿವಿಗಳೆ
ಮಧುರ ಜಲಧಾರೆ ಹರಿಸುವ ದೇವಿಯರೆ
ಮಧುವ್ರತೆಯರೆ ನೀವೆಮ್ಮ ಹರಸಿರಿ
ಧನ-ಯಜ್ಞ-ದೇವತ್ವ ಧರಿಸಿಹ ನೀವ್‌ಗಳು
ಕರುಣಿಸಿರೆಮಗೆ ಅನ್ನ-ಬಲ-ವೀರ್ಯಗಳನು. (ಋ.೬.೭೦.೫)

ಹೇ ನಿರ್ಮಲಾನಿಲನೆ ಹೃದಯದಲಿ ಚೇತನವ ಮೂಡಿಸು
ನಿರೋಗ ಸುಖೌಷಧಿಗಳನಿತ್ತೆಮ್ಮ ಆಯುವರ್ಧನೆ ಮಾಡು
(ಋ.೧೦.೧೮೬.೧)

ಪರಮಪದದಲ್ಲಿ ನಿನ್ನ ಅಮೃತದ ನಿಕ್ಷೇಪ
ಹೇ ನಿರ್ಮಲಾನಿಲನೆ ಕೊಡು ನಮಗೆ ಅಮೃತತ್ವ.
(ಋ.೧೦.೧೮೬.೩)



ಹೀಗೆ ಋಗ್ವೇದದ ಋಷಿಗಳಿಗೆ ಪಂಚಭೂತಗಳಿಂದ ಉಂಟಾದ ಕಾಡು ನದಿ ಪರ್ವತ ನೆಲ ಆಕಾಶ ಗಾಳಿ ನೀರು ಎಲ್ಲವೂ ಮನುಷ್ಯನ ಬದುಕಿನ ಮೇಲೆ ತಮ್ಮ ಚಿರಂತನ ಪ್ರಭಾವವನ್ನು ಉಂಟುಮಾಡುತ್ತಿರುತ್ತವೆ ಎಂಬುದು ಗೊತ್ತಿತ್ತು. ಈ ಎಲ್ಲ ಪ್ರಕೃತಿಸಹಜ ಉಪಾದಾನಗಳ ಸಂಯೋಜಿತ ಸಂಯುಕ್ತ ಸತ್ವವೇ ಪರಿಸರ. ನಾವಿಂದು ಋಗ್ವೇದದ ಋಷಿಗಳಂತೆ ಇವೆಲ್ಲವನ್ನೂ ಒಟ್ಟಾಗಿ ಪರಿಗಣಿಸಿ ಯೋಚಿಸಲಾರದ ಸ್ಥಿತಿಯಲ್ಲಿದ್ದೇವೆ.

ಜೀವಿಪರಿಸ್ಥಿತಿ ಎಂದರೇನೇ ಒಂದು ಜೀವಿಯು ತನ್ನ ಸುತ್ತಣ ಒಟ್ಟು ಪರಿಸರದ ಯಾವ ಯಾವ ಪ್ರಭಾವಗಳಿಗೆ ಏಕಕಾಲದಲ್ಲಿ ಒಳಗಾಗಿರುತ್ತದೆ ಎಂಬುದರ ಮೊತ್ತ. ನಾವು ಈ ಪ್ರಭಾವಗಳನ್ನೆಲ್ಲಾ ಒಂದೊಂದಾಗಿ ವಿಶ್ಲೇಷಿಸಿ ಅಭ್ಯಾಸ ಮಾಡಬಲ್ಲೆವೇ ಹೊರತು ಅವುಗಳ ಮೊತ್ತವಾದ ಸಂಯುಕ್ತ ಪ್ರಭಾವವನ್ನು ಅಧ್ಯಯನ ಮಾಡಿ ತಿಳಿಯಲಾರೆವು. ಈ ಸಂಯುಕ್ತಪ್ರಜ್ಞೆ ವೇದಕಾಲದ ಋಷಿಗಳಿಗೆ ಇತ್ತು ಎಂಬುದೇ ಅವರ ಹಿರಿಮೆಯಾಗಿದೆ. ✡

> ಇಳೆಯಿಂದ ಮೊಳಕೆಯೊಗೆವಂದು ತಮಟೆಗಳಿಲ್ಲ
> ಫಲ ಮಾಗುವಂದು ತುತ್ತೂರಿ ದನಿಯಿಲ್ಲ!
> ಬೆಳಕೀವಸೂರ್ಯಚಂದ್ರರದೊಂದು ಸದ್ದಿಲ್ಲ
> ಹೊಲಿ ನಿನ್ನ ತುಟಿಗಳನು – ಮಂಕುತಿಮ್ಮ ‖ – ಡಿ.ವಿ.ಜಿ.

## ಸ್ವಾಮಿ ತ್ರಿಗುಣಾತೀತಾನಂದರ ಪಚನಶಕ್ತಿ

ತ್ರಿಗುಣಾತೀತರಿಗೆ ತಿನ್ನುವ ಸಾಮರ್ಥ್ಯ ಬಹಳ. ಅತಿ ಹೆಚ್ಚು ಆಹಾರ ತಿಂದುಹಾಕಲೂ ಬಲ್ಲರು, ಅನೇಕ ದಿನಗಳು ಉಪವಾಸವಿಗಲೂ ಬಲ್ಲರು. ಅವರ ಈ ವಿಚಿತ್ರ ಆಹಾರದ ಅಭ್ಯಾಸವನ್ನು ಕುರಿತು ಒಮ್ಮೆ ಪ್ರೇಮಾನಂದರು ಹೇಳಿದರು : "ಅವನು ಸಿದ್ಧಪುರುಷ. ಒಮ್ಮೆ ನಾನು ಏಳೂವರೆ ಸೇರು ಹಾಲನ್ನು ಇಂಗಿಸಿ ಪಾಯಸ ಮಾಡಿ ಎಲ್ಲವನ್ನೂ ಅವನಿಗೆ ಬಡಿಸಿದೆ. ಒಂದಿನಿತೂ ಬಿಡದೆ ಎಲ್ಲವನ್ನೂ ತಿಂದು ಮುಗಿಸಿದ ಭೂಪ! ಇನ್ನೊಂದು ಸಲ ಬೇಲೂರು ಮಠದ ಬೇಲದ ಮರದ ಕೆಳಗೆ ಅನೇಕ ದಿನಗಳು ದಿನಕ್ಕೆ ಒಂದೇ ಒಂದು ಬಾಳೆ ಹಣ್ಣು ತಿಂದುಕೊಂಡು ವಾಸಮಾಡುತ್ತಿದ್ದ." ಒಮ್ಮೆ ಪ್ರೇಮಾನಂದರ ತಾಯಿ ಶ್ರೀರಾಮಕೃಷ್ಣರ ಮೂವರು ಶಿಷ್ಯರನ್ನು ಬಲರಾಮ ಬಸುವಿನ ಮನೆಗೆ ಕರೆದಿದ್ದರು. ಬಗೆಬಗೆಯ ಅಡಿಗೆಗಳು ಸಿದ್ಧವಾಗಿದ್ದವು; ಆದರೆ ಏನೋ ಕಾರಣಾಂತರದಿಂದ ತ್ರಿಗುಣಾತೀತರೊಬ್ಬರೇ ಊಟಕ್ಕೆ ಹೋಗುವಂತಾಯಿತು. ಆಕೆಗೆ ಅಡುಗೆ ಮಾಡಿದ್ದೆಲ್ಲಾ ದಂಡವಾಗುವುದಲ್ಲ ಎಂದು ದುಃಖ. ತ್ರಿಗುಣಾತೀತರು ಊಟಕ್ಕೆ ಕುಳಿತವರು ಮಾಡಿದ ಅಡುಗೆಯೆಲ್ಲವನ್ನೂ ತಿಂದು ಮುಗಿಸಿಬಿಟ್ಟರು! ಇವರಿಗೆ ಏನಾಗಿಬಿಡುವುದೋ ಎಂದು ಪ್ರೇಮಾನಂದರ ತಾಯಿಗೆ ಭಯವಾಯಿತು. ಮಾರನೆಯ ದಿನ ಸ್ವಾಮಿಗಳು ಎಂದಿನಂತೆ ಆರೋಗ್ಯವಾಗಿರುವುದನ್ನು ಕಂಡು ಆಕೆ ನುಡಿದಳು: "ಶಾರದ ತಿನ್ನುವುದನ್ನು ನೋಡಿದರೆ ಆಶ್ಚರ್ಯವಾಗುತ್ತದೆ. ಅವನು ಅನೇಕ ಪರ್ವತಗಳನ್ನು ಹತ್ತಿ ಅನೇಕ ಮಂತ್ರಗಳನ್ನು ಕಲಿತಿರುವನೆಂದು ಕಾಣುತ್ತದೆ. ಅದಕ್ಕೇ ಅನ್ನದ ಪರ್ವತವನ್ನೇ ಕರಗಿಸಿಬಿಡುತ್ತಾನೆ. ಇಲ್ಲವಾದರೆ ಮನುಷ್ಯಮಾತ್ರನಿಗೆ ಅಷ್ಟೊಂದು ತಿನ್ನುವುದು ಸಾಧ್ಯವೇ?"